

ಕೂಡಲಸಂಗಮದಲ್ಲಿ ಪ್ರತಿವರ್ಷ ಸಂಕ್ರಾಂತಿಯನ್ನು ವಾರ್ಷಿಕ ಜಾತ್ರೆಯಂತೆ ಸಂಭ್ರಮಿಸುತ್ತಾರೆ. ಉತ್ತರ ಕರ್ನಾಟಕ ಭಾಗದ ಹೆಚ್ಚಿನ ಮಂದಿ ಈ ಸಡಗರದಲ್ಲಿ ಪಾಲ್ಗೊಂಡು ಹಬ್ಬದ ನೆನಪಿನ ಬುತ್ತಿಯನ್ನು ಮಡಿಲೊಳಗೆ ತುಂಬಿಕೊಳ್ಳುತ್ತಾರೆ.

# ಕೂಡಲಸಂಗಮದಲ್ಲಿ ಶರಣಮೇಳದ ಸಡಗರ

■ **ಪ್ರಭು ಬ. ಅಡವಿಹಾಳ**

ಸಂಗಪ್ಪ ಎಲ್ಲೊಂಟಿ..?

ಕ್ವಾಟ್ಯಾಕ (ಬಾಗಲಕೋಟೆ) ಹೋಂಟಿನೋಪ... ಸಂಕ್ರಾಂತಿಗೆ ಸ್ವಲ್ಪ ಸಂತಿ, ಪ್ಯಾಟಿ ಮಾಡ್ಕೊಂಡ್ ಬರ್ತೀನಿ...

ಜೋರದ ಹಬ್ಬ...

ಕೂಡಲಸಂಗಮದಾಗ ಸಂಕ್ರಾಂತಿ ಅಂದ್ರ ಜೋರ ಇರಾಬೇಕಲ...

ಇದು ಪ್ರಸಿದ್ಧ ಯಾತ್ರಾಸ್ಥಳ ಕೂಡಲಸಂಗಮದ ಬಸವೇಶ್ವರ ವೃತ್ತದಲ್ಲಿ ಎದುರಾದ ಸ್ನೇಹಿತರ ನಡುವಿನ ಸಂಭಾಷಣೆ. ಸಂಕ್ರಾಂತಿ ಮತ್ತು ಸಂಗಮೇಶ್ವರ ಜಾತ್ರೆ ಬಂದರೆ ಸಾಕು ಕೂಡಲಸಂಗಮ ಮತ್ತು ಸುತ್ತಲಿನ ಹಳ್ಳಿಗಳಲ್ಲಿ ಸಂಭ್ರಮದ ಜತೆಗೆ ಸಾಕಷ್ಟು ನಿರೀಕ್ಷೆಗಳು ಗರಿಗೆದರುತ್ತವೆ. ಕೂಡಲಸಂಗಮದತ್ತ ಸಂಕ್ರಾಂತಿಗೆ ಲಕ್ಷಾಂತರ ಜನರು ಹೆಜ್ಜೆ ಹಾಕುತ್ತಾರೆ. ನೂರಾರು ಅಂಗಡಿಗಳು ತಿಂಗಳು ಮೊದಲೇ ಬಂದು ಠಿಕಾಣಿ ಹೂಡಿರುತ್ತವೆ. ಮೊಸರಿನ ಮಂಗಮ್ಮ, ಸಜ್ಜಿರೊಟ್ಟಿಯ ಸಂಗವ್ವ, ಮಜ್ಜಿಗೆಯ ಮಲ್ಲಮ್ಮ ಎಲ್ಲರೂ ಬುತ್ತಿಯ ಬುಟ್ಟಿ ತಲೆ ಮೇಲೆ ಹೊತ್ತು ತಂದು ವ್ಯಾಪಾರ ಮಾಡಿ ಈ ವೇಳೆ ನಾಲ್ಕು ಕಾಸು ಸಂಪಾದಿಸಿ ಖುಷಿಪಡುತ್ತಾರೆ. ಆಟಿಗೆಯ ಅಂಗಡಿಯವರು, ಬಳೆಗಾರರಿಗೆ ಬಿಡುವಿಲ್ಲದ ಕೆಲಸ ಇರುತ್ತದೆ.

- **ತುಂಬಿ ತುಳುಕುವ ಕೃಷ್ಣೆ, ಮಲಪ್ರಭೆ:** ಉತ್ತರ ಕರ್ನಾಟಕದ ಜೀವನದಿ ಕೃಷ್ಣೆ ಮತ್ತು ಬೇಸಿಗೆಯಲ್ಲಿ ಹಳ್ಳದಂತೆ ಹರಿದು ಮಳೆಗಾಲದಲ್ಲಿ ಅಬ್ಬರಿಸಿ, ಬೊಬ್ಬಿರಿಯುವ ಮಲಪ್ರಭಾ ನದಿಯೇ ಇಲ್ಲಿನ ಪ್ರಮುಖ ಆಕರ್ಷಣೆ. ಇಲ್ಲಿಯವರು ಕೃಷ್ಣೆಗೆ ದೊಡ್ಡಹೊಳೆ, ಮಲಪ್ರಭೆಗೆ ಚಿಕ್ಕಹೊಳೆ ಎಂದು ಕರೆಯುವುದುಂಟು. ಕೃಷ್ಣೆ ವಿಶಾಲವಾಗಿ ಹರಡಿದ್ದು, ಸಮುದ್ರದಂತೆ ಭಾಸವಾದರೂ ತೆಪ್ಪಗೆ ಹರಿಯುತ್ತಾಳೆ. ಆದರೆ ಇಲ್ಲಿಯ ಜನ ಹೆದರುವುದು ಮಾತ್ರ ಹಳ್ಳದಂತಿರುವ ಮಲಪ್ರಭೆಗೆ. ಮಳೆಗಾಲದಲ್ಲಿ ಮಲಪ್ರಭೆ ಸೃಷ್ಟಿಸುವ ಅನಾಹುತ ಅಷ್ಟಿಷ್ಟಲ್ಲ. ಬೇಸಿಗೆಯಲ್ಲಿ ಕಾಲ್ನಡಿಗೆಯಲ್ಲಿ ದಾಟಬಹುದಾದ ಮಲಪ್ರಭೆ, ಮಳೆ ಬಿತ್ತೆಂದರೆ ಸಾಕು ಅಕ್ಕನನ್ನು (ಕೃಷ್ಣೆ) ಸೇರಲು ಓಡೋಡಿ ಬಂದು ಬಸವಣ್ಣನವರ ಐಕ್ಯಮಂಟಪ ಇರುವಲ್ಲಿಯೇ ಸಂಗಮವಾಗುತ್ತಾಳೆ. ಹೀಗಾಗಿ ಸಂಕ್ರಾಂತಿ ಸಂದರ್ಭದಲ್ಲಿ ಎರಡೂ ನದಿಗಳು ತುಂಬಿ ಹರಿಯುವುದರಿಂದ ಜನತೆಯೂ ಕೂಡಲಸಂಗಮದತ್ತ ದೌಡಾಯಿಸುತ್ತಾರೆ.
- **ಕೂಡಲಸಂಗಮದೇವ:** ಕೂಡಲಸಂಗಮದೇವ ಬಸವಣ್ಣನವರ ವಚನಗಳ ಅಂಕಿತನಾಮ. ಸಂಗಮೇಶ್ವರನೇ ಕೂಡಲಸಂಗಮದ ಅಧಿಪತಿ. ಈ ಮೊದಲು ಕಪ್ಪಡಿಸಂಗಮ ಎಂದು ಹೆಸರಾಗಿದ್ದ ಕೂಡಲಸಂಗಮ ಸಂಗಮೇಶ್ವರ ದೇವಸ್ಥಾನದಿಂದಲೇ ಪ್ರಸಿದ್ಧಿ. ಇದು ಬಸವಣ್ಣನವರ ವಿದ್ಯಾಕೇಂದ್ರವೂ ಹೌದು. ಹೀಗಾಗಿ ಕೃಷ್ಣೆ, ಮಲಪ್ರಭೆಯಲ್ಲಿ ಮಿಂದೆದ್ದವರು ಮೊದಲು ಸಂಗಮೇಶ್ವರನ ದರ್ಶನ ಪಡೆಯುತ್ತಾರೆ. ಹುನಗುಂದ ತಾಲ್ಲೂಕಿನ ರಾಜಕಾರಣವೂ ಸಂಗಮೇಶ್ವರನ ಆಣೆ, ಪ್ರಮಾಣದ ಸುತ್ತಲೇ ಗಿರಕಿ ಹೊಡೆಯುತ್ತದೆ.
- **ಪ್ರಮುಖ ಆಕರ್ಷಣೆ ಶರಣಮೇಳ:** ಕೂಡಲಸಂಗಮದಲ್ಲಿ ಸಂಕ್ರಾಂತಿಯ ಮತ್ತೊಂದು ವಿಶೇಷತೆ ಶರಣಮೇಳ. 1988ರಿಂದ ಇಲ್ಲಿ ಶರಣಮೇಳ ನಡೆಯುತ್ತಾ ಬರುತ್ತಿದ್ದು, ಪ್ರಸ್ತುತ 39ನೇ ಶರಣಮೇಳಕ್ಕೆ ಸಂಗಮ ಸಜ್ಜಾಗಿದೆ. ಬಸವಣ್ಣನವರ ತತ್ವ, ಸಂದೇಶಗಳಲ್ಲಿ ನಂಬಿಕೆ ಇಟ್ಟುಕೊಂಡು ಲಿಂಗಾನಂದ ಸ್ವಾಮೀಜಿ ಮತ್ತು ಮಾತೆ ಮಹಾದೇವಿ ಶರಣ ಮೇಳ ಪ್ರಾರಂಭಿಸಿದರು. ಜನರಲ್ಲಿ ಸಮಾನತೆ, ಸಹೋದರತ್ವ ಬೆಳೆಸಲು ಧರ್ಮವನ್ನೇ ಜನರ ಮನೆ ಮನಗಳಿಗೆ ತಲುಪಿಸಬೇಕೆಂಬ ಉದ್ದೇಶದಿಂದ ಶರಣ ಮೇಳವನ್ನು ನಡೆಸಲಾಗುತ್ತಿದೆ. ಬಸವಣ್ಣನರ ಕಾರ್ಯಕ್ಷೇತ್ರ ಬೀದರ್ ಜಿಲ್ಲೆಯಿಂದ ಲಕ್ಷಾಂತರ ಜನರು ಬಂದು ಶರಣಮೇಳದಲ್ಲಿ ಭಾಗಿಯಾಗುತ್ತಾರೆ. ಇದನ್ನು ಪ್ರತಿ ವರ್ಷ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಆಚರಿಸುತ್ತಿದೆ.
- **ಮನೆಗೊಬ್ಬ ಸಂಗಪ್ಪ, ಬಸಪ್ಪ:** ಕೂಡಲಸಂಗಮ ಸೇರಿದಂತೆ ಸುತ್ತಲಿನ ಹತ್ತಾರು ಹಳ್ಳಿಗಳಲ್ಲಿ, ಸಂಗಪ್ಪ, ಬಸಪ್ಪ, ನೀಲಮ್ಮ, ಅಪ್ಪಣ್ಣ ಅನ್ನೋ ಹೆಸರುಗಳು ಸರ್ವೇಸಾಮಾನ್ಯ. ಒಂದೊಂದು ಮನೆಯಲ್ಲಂತೂ ಈ ಹೆಸರುಗಳ ಎಲ್ಲರೂ ಇರುವುದು ಉಂಟು. ಲಕ್ಷಾಂತರ ಭಕ್ತರನ್ನು ಹೊಂದಿರುವ ಕೂಡಲಸಂಗಮದೇವ ಹಲವರ ಮನೆಯ ದೇವರೂ ಹೌದು. ಬಸವಣ್ಣನವರ ಪತ್ನಿ ನೀಲಮ್ಮ ಕೂಡ ಕೆಲವರ ಮನೆ ದೇವರಾಗಿ ನೆಲೆ ನಿಂತಿದ್ದಾಳೆ. ತಂಗಡಗಿಯಲ್ಲಿ ನೆಲೆ ನಿಂತಿರುವ ನೀಲಾಂಬಿಕೆಯನ್ನು ಭಕ್ತರು ಸಂಗಮೇಶ್ವರ ಜಾತ್ರೆಯ ಸಮಯದಲ್ಲಿ ಅದ್ದೂರಿಯಾಗಿ ಕರೆ ತರುತ್ತಾರೆ. ಜಾತ್ರೆಯ ಬಳಿಕ ಸಂಪ್ರದಾಯಬದ್ಧವಾಗಿ ಬೀಳ್ಕೊಡುತ್ತಾರೆ. ಸಂಕ್ರಾಂತಿಗೆ ಕೂಡಲಸಂಗಮಕ್ಕೆ ಬಂದವರು ಲಾಂಚ್‌ನಲ್ಲಿ ನೀಲಮ್ಮನ ದರ್ಶನಕ್ಕೆ ತೆರಳುವ ವಾಡಿಕೆಯೂ ಇದೆ.
- **ದಾರಿ ಯಾವುದಯ್ಯಾ ಸಂಗಮಕ್ಕೆ?:** ಜಿಲ್ಲಾ ಕೇಂದ್ರ ಬಾಗಲಕೋಟೆಯಿಂದ 50 ಕಿ.ಮೀ. ಅಂತರದಲ್ಲಿರುವ ಕೂಡಲಸಂಗಮಕ್ಕೆ ರೈಲು, ಬಸ್ಸಿನ ಮೂಲಕ ಬಂದು ಹೋಗಬಹುದು. ರಾಜಧಾನಿ ಬೆಂಗಳೂರಿನಿಂದ 445 ಕಿ.ಮೀ, ದೂರವಿರುವ ಸಂಗಮಕ್ಕೆ ಸಮೀಪದ ರೈಲುನಿಲ್ದಾಣ ಆಲಮಟ್ಟಿ. ಗೋಲ್‌ಗುಂಬಜ್ ಎಕ್ಸ್‌ಪ್ರೆಸ್ ಹತ್ತಿ ಆಲಮಟ್ಟಿಯಲ್ಲಿಳಿದು, ಅಣೆಕಟ್ಟೆಯ ಅಲ್ಲಿನ ಜಲರಾಶಿ ಕಣ್ತುಂಬಿಕೊಂಡು, ರಸ್ತೆ ಮಾರ್ಗವಾಗಿ ಕೂಡಲಸಂಗಮಕ್ಕೆ ಬರಬಹುದು. ಹೀಗಾಗಿ ಉತ್ತರ ಕರ್ನಾಟಕದ ಬಹುತೇಕರ ಮೊದಲ ಆದ್ಯತೆ ಕೂಡಲಸಂಗಮ.

■

